## ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರವಾರ (ಆರ್ಥಿಕ ವಿಭಾಗ)ದ ನಡವಳಿಗಳು.

ವಿಷಯ: 2012-13 ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202-01-197-1-01 (ಯೋಜನೆ)ಅಡಿ ಸರ್ವಶಿಕ್ಷಣ ಅಬಿಯಾನ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಶಿಕ್ಷಕರು/ ಸಿಬ್ಬಂದಿಗಳ ವೇತನ ಪಾವತಿಸಲು ನಾಲ್ಕನೇ ತ್ರೈಮಾಸಿಕ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ: 1.ಕರ್ನಾಟಕ ಸರ್ಕಾರದ ಆ.ನಂ.ಎಫ್ ಡಿ:63:ಜೆಡ್‌ಪಿಎಂ:93 ದಿ:01-04-98.

2. ಸರ್ಕಾರದ ಸುತ್ತೋಲೆ ಸಂ:ಆರ್ ಡಿಪಿ:ಎಎಫ್ ಎಸ್:2:99 ದಿ:01-07-99.
3. ಸರ್ಕಾರದ ಸುತ್ತೋಲೆ ಸಂ:ಎಫ್ ಡಿ:07:ಜೆಡ್‌ಪಿಎ:2003 ದಿ:08-09-2004 ಮತ್ತು 14-07-2005.
4. ಸರ್ಕಾರಿ ಆದೇಶ ಪಂ ಸಂ: ಇಡಿ:77ಎಂಸಿಡಿ:2012 ದಿ:18-04-2012.
5. ಸರ್ಕಾರಿ ಆದೇಶ FD-2:ZPA:2012 ದಿ:4-12-2012.
6. ತಮ್ಮ ಪತ್ರ ಸಂಖ್ಯೆ: ಅ1:ಸ.ಶಿ.ಅ/ಜಿ.ಪಂ/ಅನುದಾನ/2012-13 ದಿ:19-12-2012

*****

ತಾಲೂಕಾ ಪಂಚಾಯತಗಳಿಗೆ ಅನುದಾನ ಬಿಡುಗಡೆ ಮಾಡುವ ವಿಧಾನವನ್ನು ಉಲ್ಲೇಖ (1) ರಿಂದ (3) ರ ಆದೇಶ ಮತ್ತು ಸುತ್ತೋಲೆಗಳಲ್ಲಿ ವಿವರಿಸಲಾಗಿದೆ. ಉಲ್ಲೇಖ (3) ರಲ್ಲಿ ದಿ:01-04-2005 ರಿಂದ ಅನುದಾನವನ್ನು ತಾಲೂಕ ಪಂಚಾಯತಗಳಿಗೆ ಬಿಡುಗಡೆ ಮಾಡುವ ವಿಧಾನದಲ್ಲಿ ಬದಲಾವಣೆ ತರಲಾಗಿದ್ದು, ಆ ಪ್ರಕಾರ ಸರ್ಕಾರದಿಂದ ಬಿಡುಗಡೆ ಆದ ಅನುದಾನವನ್ನು ಜಿಲ್ಲಾ ಪಂಚಾಯತ ಲೆಕ್ಕಕ್ಕೆ ಜಮಾ ತೆಗೆದುಕೊಳ್ಳದೇ ನೇರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಉಲ್ಲೇಖ (4) ರ ಸರ್ಕಾರಿ ಆದೇಶದಲ್ಲಿ ಲೆಕ್ಕ ಶೀರ್ಷಿಕೆ 2202-00-101-0-19 ಜಿಲ್ಲಾ ಪಂಚಾಯತ ಒದಗಿಸಿದ ಅನುದಾನದಲ್ಲಿ ಹಿಂದಕ್ಕೆ ಪಡೆಯಲು ಲೆ.ಶಿ:2202-01-197-1-01 (2202-00-101-0-19) ಯೋಜನೆಯಡಿ ವೆಚ್ಚ ಭರಿಸಲು ಆದೇಶವಿರುತ್ತದೆ. ಅದೇ ಪ್ರಕಾರ ಇದಕ್ಕನುಗುಣವಾಗಿ 2012-13ನೇ ಸಾಲಿನ ಮೇಲಿನ ವಿಷಯದಲ್ಲಿ ತಿಳಿಸಿದ ಅನುದಾನವು ಉಲ್ಲೇಖ (5) ರಲ್ಲಿ ಸರ್ಕಾರದಿಂದ ಬಿಡುಗಡೆ ಆಗಿರುತ್ತದೆ. ತಾಲೂಕ ಪಂಚಾಯತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ತಾಲೂಕಾವಾರು ಹಂಚಿಕೆಯನ್ನು ಉಲ್ಲೇಖ (6) ರ ಸರ್ಕಾರಿ ಆದೇಶದ ಪ್ರಕಾರ ಹಂಚಿಕೆ ಆಧಾರದ ಮೇಲೆ ಈ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಅನುದಾನ ಬಿಡುಗಡೆಯ ಹಂಚಿಕೆಯನ್ನು ಈ ಆದೇಶಕ್ಕೆ ಲಗತ್ತಿಸಿದೆ.

### ಆದೇಶ ಸಂ:ಜಿಪಂ:ಆರ್ಥಿಕ:ಬಜೆಟ್:ತಾ.ಪಂ.ಅನುದಾನ:12-13 ದಿನಾಂಕ:21-12-2012.

ತಾಲೂಕ ಪಂಚಾಯತಗಳಿಗೆ ವಹಿಸಿಕೊಡಲಾದ ಪ್ರಕಾರ್ಯಗಳಿಗೆ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ 2012-13 ನೇ ಸಾಲಿನ ಅನುದಾನವನ್ನು ಈ ಮೂಲಕ ಬಿಡುಗಡೆಗೊಳಿಸಿದೆ. ಈಗ ಬಿಡುಗಡೆಗೊಳಿಸಲಾದ ಅನುದಾನ ತಾಲೂಕಾ ಪಂಚಾಯತವಾರು ವಿವರವನ್ನು ಈ ಆದೇಶಕ್ಕೆ ಲಗತ್ತಿಸಿದೆ. ಈ ಅನುದಾನವನ್ನು ಉಲ್ಲೇಖ (3)ರ ಆದೇಶದಲ್ಲಿ ವಿವರಿಸಿದ ವಿಧಾನದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಐ.ಎ. ಬಿಲ್ಲುಗಳ ಮೂಲಕ (ಬಿಳಿ ಕಲರ್) ಪಡೆದು ಕೇಂದ್ರ ಪುರಸ್ಕೃತ ಯೋಜನೆಗಳ ಮೊತ್ತವನ್ನು ತಾ.ಪಂ. ನಿಧಿ-I ಕ್ಕೆ ಹಾಗೂ ರಾಜ್ಯ ಯೋಜನೆಗಳ ಮೊತ್ತವನ್ನು ತಾ.ಪಂ. ನಿಧಿ-II ಕ್ಕೆ ವರ್ಗಾವಣೆ ಮೂಲಕ ಜಮಾ ಮಾಡಿಕೊಳ್ಳುವದು. ಮತ್ತು ಈ ಅನುದಾನವನ್ನು ಒಂದು ವಾರದೊಳಗೆ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆಗೊಳಿಸುವುದು ಮತ್ತು ಪ್ರತಿಯೊಂದು ಶೀರ್ಷಿಕೆಗೆ ಉಪ ಶೀರ್ಷಿಕೆ/ಒಬ್ಜೆಕ್ಟ ಕೋಡ್ ಪ್ರಕಾರ ಹಂಚಿಕೆ ಮಾಡಿ ಬಿಡುಗಡೆಗೊಳಿಸುವುದು. ಮತ್ತು ಬಿಡುಗಡೆ ಮಾಡಿದ ಅನುದಾನವನ್ನು ನಿಗದಿತ ಉದ್ದೇಶಕ್ಕೆ ಮಾತ್ರ ಮಂಜೂರಾದ 2012-13ನೇ ಸಾಲಿನ ಕ್ರಿಯಾ ಯೋಜನೆಯಂತೆ ಖರ್ಚು ಮಾಡುವಂತೆ ನೋಡಿಕೊಳ್ಳುವದು. ಈ ಅನುದಾನವನ್ನು ದಿ:31-03-2013ರೊಳಗೆ ಖರ್ಚು ಮಾಡುವದು.

ಅನುದಾನದ ಹಂಚಿಕೆ ವಿವರ ಹಾಗೂ ಅನುದಾನ ಬಿಡುಗಡೆ

ರೂ. ಲಕ್ಷಗಳಲ್ಲಿ

| ಕ್ರ. ಸಂ. | ತಾಲೂಕು ಪಂಚಾಯತ ಹೆಸರು | 2202-01-197-1-01 P<br>2202-00-101-0-19 P | |
|---|---|---|---|
| | | ಹಂಚಿಕೆ | ಬಿಡುಗಡೆಯಾದ ಅನುದಾನ |
| 1. | ಅಂಕೋಲಾ | 101.99 | 29.50 |
| 2. | ಭಟ್ಕಳ | 291.60 | 71.00 |
| 3. | ಹಳಿಯಾಳ | 181.64 | 36.00 |
| 4. | ಹೊನ್ನಾವರ | 136.34 | 26.50 |
| 5. | ಕಾರವಾರ | 88.80 | 15.50 |
| 6. | ಕುಮಟಾ | 139.60 | 17.50 |
| 7. | ಮುಂಡಗೋಡ | 289.72 | 53.00 |
| 8. | ಸಿದ್ದಾಪೂರ | 264.98 | 45.50 |
| 9. | ಸಿರ್ಸಿ | 349.64 | 68.00 |
| 10. | ಜೋಯಿಡಾ | 134.42 | 22.00 |
| 11. | ಯಲ್ಲಾಪುರ | 247.17 | 60.50 |
| | ಒಟ್ಟು | 2225.90 | 445.00 |

ಮುಖ್ಯ ಲೆಕ್ಕಾಧಿಕಾರಿಗಳು,
ಉ.ಕ.ಜಿಲ್ಲಾ ಪಂಚಾಯತ, ಕಾರವಾರ.

ಪ್ರತಿಯನ್ನು:

1. ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ, ಕಾರವಾರ: ಅಂಕೋಲಾ :ಕುಮಟಾ:ಹೊನ್ನಾವರ: ಭಟ್ಕಳ:ಸಿರ್ಸಿ:ಸಿದ್ದಾಪೂರ:ಯಲ್ಲಾಪುರ:ಮುಂಡಗೋಡ:ಹಳಿಯಾಳ:ಜೋಯಿಡಾ.
2. ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಕಾರವಾರ ರವರಿಗೆ ಅನುದಾನ ಹಂಚಿಕೆಯ ಫ್ಲಾಪಿ ಮತ್ತು ಹಾರ್ಡ ಪ್ರತಿಯೊಂದಿಗೆ, ಈ ಹಂಚಿಕೆಯನ್ನು ಎಸ್.ಐ.ಸಿ.ಗೆ ಅಳವಡಿಸಲು ವಿನಂತಿಸಿದೆ.
3. ಉಪ ಖಜಾನಾಧಿಕಾರಿಗಳು, ಅಂಕೋಲಾ :ಕುಮಟಾ: ಹೊನ್ನಾವರ:ಭಟ್ಕಳ:ಸಿರ್ಸಿ: ಸಿದ್ದಾಪೂರ: ಯಲ್ಲಾಪುರ:ಮುಂಡಗೋಡ:ಹಳಿಯಾಳ:ಜೋಯಿಡಾ.
4. ಮಾನ್ಯ ಅಧ್ಯಕ್ಷರು:ಉಪಾಧ್ಯಕ್ಷರು, ಉ.ಕ. ಜಿಲ್ಲಾ ಪಂಚಾಯತ, ಕಾರವಾರ.
5. ಉಪ ಕಾರ್ಯದರ್ಶಿ(ಆಡಳಿತ) (ಅಭಿವೃದ್ಧಿ), ಉ.ಕ. ಜಿ.ಪಂ. ಕಾರವಾರ.
6. ಮುಖ್ಯ ಯೋಜನಾಧಿಕಾರಿ, ಉ.ಕ. ಜಿ.ಪಂ. ಕಾರವಾರ.
7. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಾರವಾರ ರವರಿಗೆ ಮಾಹಿತಿಗಾಗಿ.